

# ಪ್ರಹಸನ ಪ್ರಸಂಗ

ಎರಡು ವರ್ಷದ ಮಗಳು ಪೇಜ್ ತನ್ನ ತಾಯಿ ಹಾಗೂ ಅಕ್ಕನೊಂದಿಗೆ ದಂತವೈದ್ಯರ ಬಳಿಗೆ ಹೋಗಿದ್ದಳು. ವೈದ್ಯರು ಹಿರಿಯ ಮಗಳ ಹಲ್ಲನ್ನು ಪರೀಕ್ಷಿಸುತ್ತಿದ್ದಾಗ ಪೇಜ್ ಅಲ್ಲಿದ್ದ ಆಟದ ಬೊಂಬೆಯೊಂದಿಗೆ ಆಟ ಪ್ರಾರಂಭಿಸಿದಳು. ಸ್ವಲ್ಪ ಸಮಯದ ನಂತರ ತಾಯಿಯತ್ತ ನೋಡಿದಳು. ತಾಯಿ ಕಣ್ಣು ಮುಚ್ಚಿಕೊಂಡು ವಿರಾಮವಾಗಿ ಕುಳಿತಿರುವುದನ್ನು ನೋಡಿ ಪೇಜ್ ಉಳಿದ ಎಲ್ಲ ರೋಗಿಗಳ ಮುಂದೆಯೇ ತಾಯಿಗೆ ಹೇಳಿದಳು,"ಅಮ್ಮಾ! ಎದ್ದೇಳು. ಇದು ಚರ್ಚ್ ಅಲ್ಲ!" ತಾಯಿಗೆ ಎಚ್ಚರವಾದಾಗ ಎಲ್ಲರೂ ಜೋರಾಗಿ ನಗುತ್ತಿರುವುದು ಕೇಳಿಸಿತು.

* * *

ಶಾಲೆಯಲ್ಲಿ ರಾಮು ಜೀವಶಾಸ್ತ್ರದ ತರಗತಿಯಲ್ಲಿ ಪಾಠ ನಡೆಯುತ್ತಿರುವಾಗ ಬಾಯಾಡಿಸಲು ಪ್ರಾರಂಭಿಸಿದ. ಉಪಾಧ್ಯಾಯರು ಇದನ್ನು ಕಂಡುಹಿಡಿದು ಗದರಿದರು, "ಏ ರಾಮು! ಏನು ಮಾಡ್ತಿದ್ದೀಯಾ?"

ರಾಮು ಕೂಡಲೇ ಹೇಳಿದ,"ಪಚನ ಕ್ರಿಯೆಯ ಕುರಿತು ಪ್ರಯೋಗ ನಡೆಸುತ್ತಿದ್ದೇನೆ."

* * *

ಹೇಳಿದ್ದೆಲ್ಲವನ್ನೂ ಪುನರುಚ್ಚರಿಸುವ ಆಟದ ಗಿಳಿ ಯೊಂದನ್ನು ಅಂಗಡಿಯಿಂದ ಬಹಳ ಹಣ ಕೊಟ್ಟು ಕೊಂಡು ಕೊಂಡ ರಾಮು. ಮನೆಗೆ ಬಂದ ಕೂಡಲೇ ಅದನ್ನು ಪರೀಕ್ಷಿಸಿ ನೋಡುತ್ತಿದ್ದಾಗ ಕೈಜಾರಿ ಕೆಳಗೆ ಬಿದ್ದುಹೋಯಿತು. ಮುರಿದು ಹೋಗದಿದ್ದರೂ ಅದರ ರೆಕ್ಕೆಗಳು ಮೊದಲಿನಂತೆ ಬಡಿದು ಕೊಳ್ಳುತ್ತಿರಲಿಲ್ಲ. ಹೆಂಡತಿಯ ಸಲಹೆಯಂತೆ ಅದನ್ನು ಅಂಗಡಿ ಯವನಿಗೆ ಮರಳಿಸುವ ಸಲುವಾಗಿ ಪುನಃ ಡಬ್ಬಿಯೊಳಗೆ ಇಡುತ್ತಿರುವಾಗ ಹೆಂಡತಿ ಎಚ್ಚರಿಸಿದಳು, "ಆ ಅಂಗಡಿ ಯವನಿಗೆ ಕೈಜಾರಿ ಬಿತ್ತು ಅಂತ ಹೇಳಬೇಡಿ. ಇದರಲ್ಲಿ ಮೊದಲೇ ದೋಷವಿದ್ದಿರಬೇಕು ಎಂದೇ ಹೇಳಿ."

ಡಬ್ಬದ ಒಳಗಿನಿಂದ ಆಟದ ಗಿಳಿ ಹೇಳಲು ಪ್ರಾರಂಭಿಸಿತು, "ಅಯ್ಯೋ, ಕೈಜಾರಿ ಬಿದ್ದು ಹೋಯಿತು, ಬಿದ್ದುಹೋಯಿತು!"

* * *

ಪಥ್ಯದ ಬಗ್ಗೆ ಕಾಳಜಿಯಿರುವವರು ಒಂದು ಸಂಘ ಮಾಡಿಕೊಂಡಿದ್ದರು. ತೂಕ ಹೆಚ್ಚಾಗದಂತೆ ನಿಯಂತ್ರಣವನ್ನು ಸಾಧಿಸಬೇಕೆಂಬುದೇ ಅವರ ಉದ್ದೇಶ. ಒಬ್ಬ ಮಹಿಳೆ ತನ್ನ ತೂಕ ಹೆಚ್ಚಾಯಿತೆಂದು ಒಂದು ದಿನ ಕೊರಗುತ್ತಿದ್ದಳು. ಹೇಗೆ ಹೆಚ್ಚಿತೆಂದು ಹೇಳಿದಳು: "ಹೋದ ಶನಿವಾರ ಅಚ್ಚುಮೆಚ್ಚಿನ ಕೇಕ್ ತಯಾರಿಸಿದ್ದೆ. ಊಟದ ವೇಳೆಯಲ್ಲಿ ಪತಿಯೊಂದಿಗೆ ಅರ್ಧ ಕೇಕ್ ಖರ್ಚಾಯಿತು. ಮಾರನೆಯ ದಿನ ಆ ಉಳಿದರ್ಧ ದಿಂದ ಒಂದು ಸಣ್ಣ ಚೂರು ತಿನ್ನಲು ಪ್ರಾರಂಭಿಸಿ ತಿನ್ನುತ್ತ ತಿನ್ನುತ್ತ ಎಲ್ಲವನ್ನೂ ತಿಂದುಬಿಟ್ಟೆ. ನನ್ನ ದುರ್ಬಲ ಇಚ್ಛಾಶಕ್ತಿ ಯನ್ನು ಹಳಿದುಕೊಳ್ಳುತ್ತ ಗಂಡನಿಗೆ ನಿರಾಶೆಯಾಗುವುದೆಂದು ಚಿಂತೆಗೊಳಗಾದೆ" ಎಂದಳು.

ಎಲ್ಲರೂ ಆಕೆ ಹೇಳಿದ್ದನ್ನು ಆಲಿಸಿ "ಗಂಡನಿಗೆ ಗೊತ್ತಾದಾಗ ಏನು ಹೇಳಿದ?" ಎಂದು ಕೇಳಿದರು. ಆಕೆ "ಅವನಿಗೆ ಗೊತ್ತೇ ಆಗಲಿಲ್ಲ. ನಾನು ಕೂಡಲೇ ಮತ್ತೊಂದು ಅದೇ ರೀತಿಯ ಕೇಕನ್ನು ತಯಾರಿಸಿ ಅರ್ಧವನ್ನು ತಿಂದುಬಿಟ್ಟೆ" ಎಂದು ಉತ್ತರವಿತ್ತಳು!

* * *

ಶಸ್ತ್ರಚಿಕಿತ್ಸೆಯ ಕಡೆಯ ಪರೀಕ್ಷೆಯಲ್ಲಿ ಪ್ರಾಧ್ಯಾಪಕರು ವಿದ್ಯಾರ್ಥಿಗೆ ಪ್ರಶ್ನೆಯನ್ನು ಕೇಳಿದರು, "ಶಸ್ತ್ರಚಿಕಿತ್ಸೆಯನ್ನು ಮಾಡುವಾಗ ಸರ್ಜನ್ ಮುಖವಾಡ ಧರಿಸುವುದೇತಕ್ಕೆ?"– ವಿದ್ಯಾರ್ಥಿ ಉತ್ತರಿಸಿದ, "ಅದು ಸಾರ್, ಏನಾದರೂ ತಪ್ಪಾದರೆ ಗುರುತು ಸಿಗದಿರಲಿ ಅಂತ!"

### ಆಶ್ರಮದ ಕಾರ್ಯಕ್ರಮಗಳು

### ಜುಲೈ ೨೦೦೫

| | | |
|---|---|---|
| ಏಕಾದಶಿ | ೦೨ | ಶನಿವಾರ |
| ಏಕಾದಶಿ | ೧೭ | ಭಾನುವಾರ |
| ಶ್ರೀಗುರು ಪೂರ್ಣಿಮಾ | ೨೧ | ಗುರುವಾರ |
| ಏಕಾದಶಿ | ೩೧ | ಭಾನುವಾರ |

ಗುರುವಾರ ಮತ್ತು ಭಾನುವಾರಗಳಂದು ಕನ್ನಡದಲ್ಲಿಯೂ ಶನಿವಾರಗಳಂದು ಇಂಗ್ಲೀಷಿನಲ್ಲಿಯೂ ಸಂಜೆ ೬ ರಿಂದ ೭ರವರೆಗೆ ಪ್ರವಚನಗಳು ನಡೆಯುತ್ತವೆ.